

ನಂತರ ಸ್ತಂಭಗಳಾಗಿ ರೂಪುಗೊಳ್ಳುತ್ತವೆ.

ಪ್ರತಿ ನೂರಿಪ್ಪತ್ತು ವರ್ಷಗಳಿಗೆ ಕೇವಲ ಒಂದು ಘನ ಅಡಿಯಷ್ಟು ಮಾತ್ರ ಹೊಸ ಪ್ರಕ್ಷೇಪಗಳು ಇಲ್ಲಿ ರೂಪುಗೊಳ್ಳುತ್ತವೆಯಂತೆ. ಅಂದರೆ ಈಗ ರೂಪುಗೊಂಡಿರುವುದನ್ನು ನೋಡಿದರೆ ಸುಮಾರು 7,000 ವರ್ಷಕ್ಕೂ ಮುಂಚಿನಿಂದಲೇ ಇದು ಪ್ರಾರಂಭವಾಗಿರಬಹುದು ಎಂದು ವಿಜ್ಞಾನಿಗಳು ದೃಢಪಡಿಸಿದ್ದಾರೆ.

ಒಳಗಡೆ ಪ್ರವಾಸಿಗರು ನಡೆದುಕೊಂಡು ಹೋಗಲು ಸುಮಾರು 5ರಿಂದ 6 ಅಡಿ ಅಗಲದ ರಸ್ತೆಯನ್ನು ಮಾಡಿದ್ದಾರೆ. ಪ್ರವಾಸಿಗರು ಮಬ್ಬಿನಲ್ಲಿ ಜಾರಿ ಬೀಳದಿರಲೆಂದು ರಸ್ತೆಯ ಇಕ್ಕೆಲಗಳಲ್ಲಿ ಉದ್ದಕ್ಕೂ ಕಂಬಿಗಳನ್ನು ಹಾಕಿದ್ದಾರೆ. ಅಲ್ಲಲ್ಲಿ ರಸ್ತೆಗಳ ತಿರುವಿನಲ್ಲಿ ವಿದ್ಯುತ್ ದೀಪಗಳ ಬೆಳಕು ಇದೆ. ಪ್ರಕ್ಷೇಪಗಳಿಗೆ ಕೆಳಗಿನಿಂದ ಫ್ಲಡ್‌ಲೈಟ್ ಮುಖಾಂತರ ಬೆಳಕನ್ನು ಹರಿಸಿದ್ದಾರೆ. ಅದೂ ಸಹ ತುಂಬಾ ಚೆನ್ನಾಗಿದೆ. ಅಲ್ಲಲ್ಲಿ ಸ್ವಯಂಸೇವಕರು ನಿಂತು ವಿವರಣೆಯನ್ನೂ ನೀಡುತ್ತಾರೆ.

ನಾವು ಒಳಗಡೆ ವೀಕ್ಷಿಸುತ್ತ ಮುಂದೆ ಸಾಗಿದರೆ ಈಗಲೂ ಕೆಲವೆಡೆ ನೀರು ಜಿನುಗುತ್ತಿರುವುದನ್ನು ಕಂಡು ಬೆರಗಾದೆವು. ದಾರಿಯೂ ಒದ್ದೆಯಾಗಿರುತ್ತದೆ. ನೀರು ಹನಿಹನಿಯಾಗಿ ಬಿದ್ದು ಕೆಲವು ಕಡೆ ನಿಂತಿದೆ. ಅದರಲ್ಲಿ ಸುಣ್ಣದ ಕಲ್ಲಿನಿಂದಾದ ನಾನಾ ಆಕಾರದ ತೂಗು ಭಾವಣಿಗಳ ಪ್ರತಿಬಿಂಬವಂತೂ ಎಲ್ಲರನ್ನೂ ಆಶ್ಚರ್ಯ ಚಕಿತಗೊಳಿಸುತ್ತದೆ.

ನೋಡುತ್ತಾ ಮುಂದೆ ಸಾಗಿದರೆ ನೆಲ ತಳದಿಂದ ಮೇಲಕ್ಕೆ ಹಾಗೂ ಮೇಲ್ಛಾವಣಿಯಿಂದ ಕೆಳಕ್ಕೆ ಸುಮಾರು 5ರಿಂದ 50 ಅಡಿವರೆವಿಗೂ ಬೆಳೆದುನಿಂತ ಸುಣ್ಣದ ಕಲ್ಲುಗಳಿಂದ ನಿರ್ಮಿತವಾದ ಪ್ರಕೃತಿಯ ವಿವಿಧ ಆಕಾರದಲ್ಲಿ ನಿರ್ಮಾಣಗೊಂಡ ಶಿಲ್ಪಗಳ ಚಿತ್ರಣ! ಇವು ಉಂಟು ಮಾಡುವ ವಿನ್ಯಾಸ ಮತ್ತು ಚಿತ್ತಾರಗಳು ಬೆರಗು ಹುಟ್ಟಿಸುತ್ತದೆ.

ನಾನಾ ಆಕಾರಗಳಲ್ಲಿ ಕಾಣುವ ತೂಗು ಭಾವಣಿಗಳು ಹಾಗೂ ನೀರಿನ ಜಿನುಗುವಿನಿಂದ ಆದ ಸ್ತಂಭಗಳ ಆಕಾರದ ಸುಮಾರು 45ರಿಂದ 50 ಅಡಿ ಎತ್ತರದ ಪ್ರಕ್ಷೇಪಗಳನ್ನು ಪ್ರತ್ಯೇಕ ಕಲಾಕೃತಿಗಳಂತೆ ನೋಡಬಹುದು. ಅಥವಾ ಸುಂದರ ಶಿಲ್ಪಗಳಂತೆಯೂ ವೀಕ್ಷಿಸಬಹುದು. ಒಂದೊಂದೂ ಬೇರೆ ಬೇರೆ ಆಕಾರದ ಶಿಲ್ಪಗಳು. ಅವುಗಳ ವರ್ಣಗಳೂ ಬೇರೆಯೇ. ನೀರಿನ ಖನಿಜಾಂಶಗಳಿಂದಾಗಿ ಕೆಲವು ಶ್ವೇತವರ್ಣದಲ್ಲಿ, ಕೆಲವು ಮಾಸಲು ಕೆಂಪು ಬಣ್ಣದಲ್ಲಿ, ಕೆಲವು ಕಂದು, ತಿಳಿನೀಲಿ ಹಾಗೂ ಹಳದಿ ಬಣ್ಣಗಳಿಂದ ಪ್ರತಿಫಲಿಸುತ್ತಿದ್ದು, ಗುಹಾಂಗಣ ವರ್ಣರಂಜಿತವಾಗಿ ಕಾಣುತ್ತದೆ.

ಮೂಲಂಗಿ, ಬೆಂಡೆಕಾಯಿ, ಬಾಳೆಹಣ್ಣಿನ ಗೊಂಚಲುಗಳಂತೆ ಇನ್ನು ಹಲವು; ಇನ್ನು ಕೆಲವು ಜೋತುಬಿದ್ದ ಆಲದಮರದ ಬೀಳಲುಗಳಂತೆ ಕಾಣಿಸುತ್ತವೆ. ಕೆಲವು ತುಂಬ ಅಗಲವಾಗಿ ಹಾಗೂ ಎತ್ತರವಾಗಿದ್ದರೆ, ಇನ್ನೂ ಕೆಲವು ಅತಿ ಎತ್ತರಕ್ಕಿವೆ. ಕೆಲವು ಕಡೆ ಮೇಲಿನಿಂದ ಕೆಳಕ್ಕೆ ಬಟ್ಟೆಗಳನ್ನು ಮಡಿಸಿ ತಂತಿಗೆ ಹಾಕಿದಂತೆ ಕಾಣುತ್ತದೆ. ಬಟ್ಟೆಯ ಫೋಲ್ಡರ್ಸ್ ತರಹವೇ ಕಾಣುವ ತೂಗು ಭಾವಣಿಗಳು ಹಾಗೂ ಈಗಲೂ ಜಿನುಗು ಹನಿಯಿಂದ ಹುಟ್ಟಿಕೊಳ್ಳುತ್ತಿರುವ ತೂಗು ಭಾವಣಿಗಳು ನಮ್ಮ ಬೆರಗನ್ನು ಇಮ್ಮಡಿಗೊಳಿಸಿದವು. ಜಿನುಗುವ ಹನಿಯಿಂದ ಕೆಲವು ಕಡೆ ಸ್ಫಟಿಕ ನಿರ್ಮಾಣವಾದಂತೆ ಭಾಸವಾಗುವ ನೀರು ನಿಂತು ಅದರೊಳಗಿಂದಲೇ ಗಿಡಗಳು ಮೊಳಕೆ ಒಡೆಯುವಂತೆ ಬೆಳೆಯುತ್ತಿವೆ. ಆ ಸ್ಥಳದಲ್ಲಿಯಂತೂ ಪ್ರವಾಸಿಗರು ಕೆಲ ನಿಮಿಷ ನಿಂತು ಕುತೂಹಲದಿಂದ ವೀಕ್ಷಿಸುತ್ತಾರೆ. ನಂತರ ತಮ್ಮ ಹರಕೆ, ಬಯಕೆಗಳು ಈಡೇರುವುದೆಂಬ ನಂಬಿಕೆಯಿಂದ ಸ್ಪಟಿಕದಂತಿರುವ ಶುಭ್ರವಾದ ನೀರಿನ ಹೊಂಡಕ್ಕೆ ನಾಣ್ಯಗಳನ್ನು ಎಸೆಯುತ್ತಾರೆ. ಒಂದು ಕಡೆಯಂತೂ ನೀರು ಹನಿ ಬಿದ್ದು ದೊಡ್ಡದಾದ ಮುತ್ತಿನ ಆಕಾರದಲ್ಲಿ ರೂಪುಗೊಂಡಿರುವುದನ್ನು ಕಾಣಬಹುದು. ಪೂರ್ತಿ ಗುಹೆಯನ್ನು ವೀಕ್ಷಿಸಲು ಸುಮಾರು ನಾಲ್ಕರಿಂದ ಆರು ಗಂಟೆಗಳಾದರೂ ಬೇಕಾಗುತ್ತದೆ.

ಒಳಭಾಗದಲ್ಲಿ ತಣ್ಣನೆಯ ಹವಾಗುಣವಿದೆ. ಸುಣ್ಣದ ಕಲ್ಲಿನ ವಾಸನೆಯಿಂದ ಕೂಡಿದ ಅಂದರೆ ಕ್ಯಾಲ್ಸಿಯಂ ಕಾರ್ಬೋನೇಟ್ ತನ್ನಲ್ಲಿರುವ ಇಂಗಾಲಾಮ್ಲವನ್ನು ಬಿಡುತ್ತಿರುವುದರ ಫಲವಾಗಿ ಅದರ ವಾಸನೆಯುಕ್ತ ಗಾಳಿಯಲ್ಲಿ ಸುತ್ತಾಡುವುದೇ ಒಂದು ತರಹದ ಅದ್ಭುತ ನಡಿಗೆ ಎನಿಸುತ್ತದೆ.